ಓ ಎಸ್ಃ 229/2016

ಪಿ ಡಬ್ಲ್ಯೂ ಃ 1

ದಿನಾಂಕಃ 19.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ರಿಂದ 6, 8 ಮತ್ತು 9 ರವರ ಪರ ಶ್ರೀ ಆರ್ ಕೆ ವಕೀಲರಿಂದಃ**

ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯಲ್ಲಿ ಇರುವ ಸಹಿ ನನ್ನ ತಂದೆಯ ಸಹಿ ಎಂದು ಗುರುತಿಸಿದ್ದು, ಸದರಿ ದಾಖಲಾತಿಯಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಅವರ ತಾಯಿಯದು ಎಂದರೆ ಸಾಕ್ಷಿ ಸಹಿ ಮಾತ್ರ ನನ್ನ ತಂದೆಯ ಸಹಿಯಾಗಿರುತ್ತದೆ. **ಆದರೆ ಹೆಬ್ಬೆಟ್ಟಿನ ಗುರುತು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿ ಡಿ 1 ಎಂದು ಗುರುತಿಸಿ , ಸದರಿ ಸಹಿಯನ್ನು ನಿ ಡಿ 1 ಎ ಎಂದು ಗುರುತಿಸಲಾಯಿತು. ನಿ ಡಿ 1 ರಲ್ಲಿ ಮತ್ತೊಂದು ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಸದರಿ ಸಹಿ ನಮ್ಮ ತಂದೆ ಹೇಗೆ ಮಾಡುತ್ತಿದ್ದರು ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.** ನಿ ಡಿ 1 ರಲ್ಲಿ ನನ್ನ ತಂದೆಯವರು ಪ್ರತಿ ಪುಟದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ತಾಯಿಯ ಹೆಬ್ಬೆಟ್ಟಿನ ಗುರುತು ನನ್ನ ತಂದೆಯವರು attest ಮಾಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿಗೆ ನಿ ಡಿ 1 ರಲ್ಲಿ ಇರುವ ಹೆಸರುಗಳನ್ನು ಓದಲು ಆಗುತ್ತದೆಯೋ ಎಂದು ಕೇಳಿದರೆ ಆಗುವುದಿಲ್ಲ ಎಂದು ಹೇಳಿದ ಕಾರಣಕ್ಕೆ ನಿ ಡಿ 1 ರಲ್ಲಿ ಇರುವ ಹೆಸರುಗಳನ್ನು ಓದಿ ಸಾಕ್ಷಿಗೆ ತಿಳಿಸಲಾಗಿ ಸಾಕ್ಷಿ ಸದರಿ ಹೆಸರುಗಳು ಅವರ ತಂದೆ ಮತ್ತು ನನ್ನ ಅಣ್ಣ ತಮ್ಮಂದಿರ ಹೆಸರುಗಳು ಎಂದು ಹೇಳುತ್ತಾರೆ.

ಪ್ರತಿವಾದಪತ್ರವನ್ನು ನಾನು ಓದಿರುವುದಿಲ್ಲ. ಪ್ರತಿವಾದಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿ ಡಿ 1 ರಲ್ಲಿ ಇರುವ ದಾಖಲಾತಿಯ ಪ್ರಕಾರ ದಿನಾಂಕಃ 15.04.1973 ರಲ್ಲಿ ನಮ್ಮ ಕುಟುಂಬದ ಸ್ವತ್ತುಗಳು ವಿಭಾಗವಾಗಿರುತ್ತದೆ ಎಂದರೆ ಸುಳ್ಳು. 1973 ನೇ ಇಸವಿಯಿಂದ ನಮ್ಮ ಕುಟುಂಬದ ಎಲ್ಲ ಸದಸ್ಯರು ವಿಭಾಗವಾಗಿ ಬೇರೆ ಬೇರೆ ಇರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಯವರು ದಿನಾಂಕಃ 30.01.1992 ರಲ್ಲಿ ಒಂದು ವಿಲ್ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ತಂದೆಯವರು 1992 ರಲ್ಲಿ ಮಾಡಿರುವ ವಿಲ್ ನಲ್ಲಿ ವಿಭಾಗವಾಗಿರುವ ವಿಚಾರ ಬರೆದಿರುತ್ತಾರೆ ಎಂದರೆ ಸುಳ್ಳು. ಸದರಿ ವಿಲ್ ನ್ನು ದಿನಾಂಕಃ 01.09.2006 ರಲ್ಲಿ ರದ್ದು ಮಾಡಿರುವ ವಿಚಾರ ಗೊತ್ತಾ ಎಂದರೆ ಗೊತ್ತಿಲ್ಲ. ದಿನಾಂಕಃ6.11.2006 ರಲ್ಲಿ ನನ್ನ ತಂದೆಯವರು ಹೆಣ್ಣು ಮಕ್ಕಳನ್ನು ಸೇರಿಸಿ ಒಂದ ವಿಲ್ ಬರೆದಿರುತ್ತಾರೆ ಎಂದರೆ ಸುಳ್ಳು. ಸದರಿ ವಿಲ್ ನಲ್ಲಿ ಮೋಟಗಾನಹಳ್ಳಿಯ ಸ.ನಂ. 96 ಸ.ನಂ.

108ಎಂದು ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಗೊತ್ತಿಲ್ಲ. ವಿಲ್ ನಲ್ಲಿ ಬರೆದಿರುವ ವಿಚಾರದಂತೆ ನಾವು ಹೆಣ್ಣು ಮಕ್ಕಳು ರೆವಿನ್ಯೂ ದಾಖಲಾತಿಗಳನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ಪಹಣಿಗಳನ್ನು ನಾನು ದುರುದ್ದೇಶದಿಂದ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸುಳ್ಳು. ಕೃಷ್ಣಮೂರ್ತಿ ರವರು ಅವರಿಗೆ ಬಂದಂತಹ ಜಮೀನನ್ನು ಕ್ರಯ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರಿಯಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಞ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**